# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ05–06–2012ರಂದು ಕಾಮಗಾರಿ ವಿಭಾಗದ ಲೆಕ್ಕ ಅಧೀಕ್ಷಕರೊಂದಿಗೆ ನಡೆದ ಸಭೆಯ ನಡವಳಿಗಳು

| ಕ್ರ.ಸ | ಶ್ರೀಯುತರ ಹೆಸರು | ಹುದ್ದೆ | ಕ್ರ. | ಅಧಿಕಾರಿಗಳ ವಿವರ |
|---|---|---|---|---|
| 1 | ಎಂ.ಗೌತಮ್ ಕುಮಾರ್ | ಅಧ್ಯಕ್ಷರು | 1 | ಮುಖ್ಯ ಲೆಕ್ಕಾಧಿಕಾರಿ |
| | ಕೆ.ಚಂದ್ರಶೇಖರ್ | ಸದಸ್ಯರು | 2 | ಎಲ್ಲಾ ವಿಭಾಗದ ಲೆಕ್ಕ ಅಧೀಕ್ಷಕರು |
| | ರೇಖ | ಸದಸ್ಯರು | | |
| | ಎಸ್.ಶಶಿರೇಖ ಜಯರಾಮ | ಸದಸ್ಯರು | | |
| | ಲೋಕೇಶ್ ನಾಯಕ್ | ಸದಸ್ಯರು | | |
| | ಇರ್ಷಾದ್ ಬೇಗಂ | ಸದಸ್ಯರು | | |
| | ಮುನಿಸಂಜೀವಯ್ಯ | ಸದಸ್ಯರು | | |
| | ಆರ್..ಉದಯಕುಮಾರ್ | ಸದಸ್ಯರು | | |
| | ಎಂ.ಶ್ರೀನಿವಾಸ್ | ಸದಸ್ಯರು | | |

- ಅಧ್ಯಕ್ಷರು ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿ / ಸಿಬ್ಬಂದಿಗಳನ್ನು ಸ್ವಾಗತಿಸಿ ಮಾತನಾಡುತ್ತಾ, ಪಾಲಿಕೆಯು ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳಲ್ಲಿ ಕಾಮಗಾರಿಯ ಇಲಾಖೆಯು ಸಹ ಒಂದು ಈ ವಿಭಾಗಗಳಲ್ಲಿ ಲೆಕ್ಕಪತ್ರಗಳನ್ನು ನೋಡುವ ಜವಾಬ್ದಾರಿ ಎಲ್ಲಾ ಲೆಕ್ಕ ಅದೀಕ್ಷಕರುಗಳ ಮೇಲೆ ಇದೆ, ಆದರೂ ಸಹ ಪಾಲಿಕೆಯಲ್ಲಿ ಮಾಸಿಕ ಲೆಕ್ಕಪತ್ರಗಳನ್ನಾಗಲೀ, ವಾರ್ಷಿಕ ಲೆಕ್ಕಪತ್ರಗಳನ್ನಾಗಲಿ ತಯಾರಿಸದೇ ಇರುವುದು ವಿಪರ್ಯಾಸದ ಸಂಗತಿ, ಈ ಲೆಕ್ಕಪತ್ರಗಳನ್ನು ನಿರ್ವಹಿಸಲು ಇರಬಹುದಾದ ಸಮಸ್ಯೆಗಳ ಬಗ್ಗೆ ಹಾಗು ಮಾಹಿತಿಗಳನ್ನು ಸಮಿತಿಗೆ ಒದಗಿಸದಿರುವ ಕುರಿತು ಪ್ರತಿ ವಿಭಾಗವಾರು ಮಾಹಿತಿ ಒದಗಿಸಲು ಸೂಚಿಸಿದರು.

- ಕೆರೆ ವಿಭಾಗದ ಲೆಕ್ಕ ಆಧೀಕ್ಷಕರು ಮಾತನಾಡಿ, ಲೇಕ್ ವಿಭಾಗದಲ್ಲಿ 5 ಜನ ಕಾರ್ಯಪಾಲಕ ಅಭಿಯಂತರರು, 5 ಭಾಗಗಳನ್ನಾಗಿ ಮಾಡಿಕೊಂಡು ಕೆಲಸ ನಿರ್ವಹಿಸುತ್ತಿದ್ದಾರೆ, ಈ ವಿಭಾಗಕ್ಕೆ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿರವರು ಮುಖ್ಯಸ್ಥರಾಗಿದ್ದು, ಲೆಕ್ಕ ಅಧೀಕ್ಷಕರು ಲೆಕ್ಕ ಸಂಕಲನ ಕಾರ್ಯವನ್ನು ನೋಡಿಕೊಳ್ಳುತ್ತಿದ್ದು ಬರುವ ಬಿಲ್ಲುಗಳನ್ನು ವಿಭಾಗಿಸಿ ಮುಖ್ಯ ಲೆಕ್ಕಾಧಿಕಾರಿಗಳನ್ನು ಎಲ್.ಓ.ಸಿ.ಕೇಳಲಾಗುತ್ತದೆ, ಸಿ.ಎ.ಓ ರವರು ಗ್ರಾಂಟ್ ಬಿಡುಗಡೆ ಮಾಡುತ್ತಾರೆ. ಹಿಂದೆ ಲೆಕ್ಕಪತ್ರ ಸ್ಥಾಯಿ ಸಮಿತಿ ಮಾಸಿಕ ಲೆಕ್ಕಗಳನ್ನು ಕೇಳುತ್ತಾ ಇರಲಿಲ್ಲ, ಸದ್ಯ ಮಾಹಿತಿ ಇದ್ದು ಒದಗಿಸಲಾಗುವುದು, ಸಿ.ಎ.ಓ. ಕಚೇರಿಯಿಂದ ಸುತ್ತೋಲೆ ಸಹ ಬಂದಿದ್ದು ಲೆಕ್ಕಪತ್ರ ನಿರ್ವಹಣೆ ಮಾಡಲಾಗುತ್ತಿದೆ, ತಿಂಗಳ ಅಂತ್ಯಕ್ಕೆ ಕ್ಲೋಸ್ ಮಾಡಿ ಎಫ್.ಬಿ.ಎ.ಎಸ್‌ಗೆ ಲೆಕ್ಕವನ್ನು ಕೊಡಲಾಗುತ್ತಿದೆ ಎಂದು ತಿಳಿಸಿದರು.

- ಎಸ್.ಡಬ್ಲ್ಯೂ.ಡಿ. ವಿಭಾಗದ ಲೆಕ್ಕ ಅಧೀಕ್ಷಕರು ಮಾತನಾಡಿ ಈ ವಿಭಾಗದಲ್ಲಿ ಬಿ.ಬಿ.ಎಂ.ಪಿ., ನರ್ಮ್, ಅನುದಾನ ಎರಡನ್ನು ನಿರ್ವಹಿಸಲಾಗುತ್ತಿದೆ, ಈ ಹಿಂದೆ ನರ್ಮ್ ಅನುದಾನವನ್ನು ಯೋಜನಾ ವಿಭಾಗದಿಂದ ನಿರ್ವಹಿಸಲಾಗುತ್ತಿತ್ತು, ಇತ್ತೀಚೆಗೆ ಮೇ ಮಾಹೆಯಿಂದ ಪಾವತಿಗಳನ್ನು ಮಾಡಲಾಗುತ್ತಿದೆ ಎಂದರು.

- ಕಾರ್ಯಪಾಲಕ ಅಭಿಯಂತರರು(ಬ್ಯಾಟರಾಯನಪುರ) ಲೆಕ್ಕ ಅಧೀಕ್ಷಕರು ಮಾತನಾಡಿ ವಿಭಾಗದಲ್ಲಿ ಕೆಲಸ ನಿರ್ವಹಿಸಲು ಪಿ.ಓ.ಡಬ್ಲ್ಯೂ., ವಿಶೇಷ ಅನುದಾನದಲ್ಲಿ ಬರುವ ಅನುದಾನ ನೋಡಿಕೊಂಡು ಟೆಂಡರ್ ಕರೆಯಲಾಗುತ್ತಿದೆ, ವಿಭಾಗಕ್ಕೆ 7 ವಾರ್ಡ್‌ಗಳಿಂದ ಬಿಲ್ಲುಗಳು ಬಂದ ಮೇಲೆ ರೆಗ್ಯುಲರ್ ಎಲ್.ಓ.ಸಿ., ಸ್ಪೇಷಲ್ ಎಲ್.ಓ.ಸಿ.ಯನ್ನು ಪಡೆದ ನಂತರ ಕಾರ್ಯಪಾಲಕ ಅಭಿಯಂತರರ ಮೂಲಕ ಜಂಟಿ ಆಯುಕ್ತರ ಅನುಮೋದನೆ ಪಡೆದು ಹಣ ಪಾವತಿಸಲಾಗುತ್ತಿದೆ, ಈ ವಿಭಾಗದಲ್ಲಿ 2 ಬ್ಯಾಂಕ್ ಅಕೌಂಟ್ ಇದ್ದು ಒಂದನ್ನು ಇ.ಎಂ.ಡಿ. ಇತರೆ ನಿರ್ವಹಣೆಗೆ ಇನ್ನೊಂದನ್ನು ಹಣ ಪಾವತಿಗೆ ಉಪಯೋಗಿಸುತ್ತಿದೆ, ನಗದು ಪುಸ್ತಕ ಬರೆದ ನಂತರ ಎಫ್.ಬಿ.ಎ.ಎಸ್.ನಲ್ಲಿ ದಾಖಲು ಮಾಡಲಾಗುತ್ತಿದೆ, ಹಿಂದಿನಿಂದಲೂ ಮಾಸಿಕ ಲೆಕ್ಕಪತ್ರಗಳನ್ನು ಮಾಡುತ್ತಿಲ್ಲದಿರಲಿಲ್ಲ, ಒಂದು ವಾರದೊಳಗೆ ಹಿಂದಿನ 5 ತಿಂಗಳ ಮಾಹಿತಿಗಳನ್ನು ಒದಗಿಸುವುದಾಗಿ ಸಮಿತಿಗೆ ತಿಳಿಸಿದರು.

- ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ ಹಳೆಯ ವಾರ್ಡ್‌ನಲ್ಲಿ ಯಾವ ರೀತಿ ನಿರ್ವಹಣೆ ಮಾಡುತ್ತಿದ್ದೀರಿ, ಏನು ಸಮಸ್ಯೆ ಇದೆ ಅದರ ಬಗ್ಗೆ ಮಾಹಿತಿಗಳನ್ನು ಅಧ್ಯಕ್ಷರ ಗಮನಕ್ಕೆ ತರಲು ಸೂಚಿಸಿದರು.

- ಶ್ರೀ.ಶಿವರಾಮೇಗೌಡ: ಲೆಕ್ಕ ಅಧೀಕ್ಷಕರು, ಮಾತನಾಡಿ, ಮಾಸಿಕ ಲೆಕ್ಕಪತ್ರಗಳನ್ನು ತಯಾರಿಸಬೇಕಾದರೆ, ಶೆಡ್ಯೂಲ್ ಡಾಕೆಟ್, ಎಕ್ಷಪೆಂಡಿಚರ್ ಸ್ಟೇಟ್‌ಮೆಂಟ್, ಗ್ರಾಂಟ್ ಅಂಡ್ ಔಟ್‌ಲೇ, ಕ್ಯಾಷ್ ಬ್ಯಾಲೆನ್ಸ್, ಇವುಗಳ ಪಟ್ಟಿಯನ್ನು ತಯಾರಿಸಿ ಮಾಸಿಕ ಲೆಕ್ಕಪತ್ರಗಳನ್ನು ನೀಡಬೇಕಾಗುತ್ತದೆ, ಪ್ರತಿ ಮಾಹೆ ನಗದು ಪುಸ್ತಕ ಮತ್ತು ಬಿ.ಆರ್. ರಿಜಿಸ್ಟರ್‌ನೊಂದಿಗೆ ಮಾಹಿತಿಗಳನ್ನು ಎಫ್.ಬಿ.ಎ.ಎಸ್.ಗೆ ಕೊಡಲಾಗುತ್ತಿದೆ. ಪಾಲಿಕೆಯಲ್ಲಿ ಪಿ.ಡಬ್ಲ್ಯೂ..ಡಿ. ಸಿಸ್ಟಮ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲವೆಂದು ತಿಳಿಸಿದರು.

- ಕೆ.ಆರ್.ಪುರ ವಿಭಾಗದ ಲೆಕ್ಕ ಅಧೀಕ್ಷಕರು ಮಾತನಾಡಿ, ಪ್ರತಿಯೊಂದು ಅಕೌಂಟ್ ಕ್ಲೋಸ್ ಆದ ಕೂಡಲೇ ಸಿ.ಎ.ಓ. ರವರು ನೀಡಿರುವ ಪಿ.ಕೋಡ್ ಮಾದರಿ ಎಫ್.ಬಿ.ಎ.ಎಸ್‌ನಲ್ಲಿ ದಾಖಲು ಮಾಡಲಾಗುತ್ತಿದೆ, ಫ್ಲೆಕ್ಸಿ ಬ್ಯಾಂಕ್ ಅಕೌಂಟ್‌ನಲ್ಲಿ ಇ.ಎಂ.ಡಿ. ಇತರೆ ನಿರ್ವಹಣೆ ಮಾಡುತ್ತಿದ್ದು, ಮಾಸಿಕ ಲೆಕ್ಕಪತ್ರಗಳನ್ನು ನೀಡಲಾಗುವುದೆಂದು ತಿಳಿಸಿದರು.

- ಗೋವಿಂದರಾಜನಗರ ವಿಭಾಗದ ಲೆಕ್ಕ ಅಧೀಕ್ಷರು ಮಾತನಾಡಿ ಬಿ.ಆರ್.ಡೀಟೈಲ್ಸ್, ಎಲ್.ಓ.ಸಿ., ಓಪನಿಂಗ್ ಬ್ಯಾಲೆನ್ಸ್, ಒಟ್ಟು ಎಲ್.ಓ.ಸಿ., ವೆಚ್ಚ ಇತ್ಯಾಧಿಗಳ ರಿಕನ್ಸಿಲೇಶನ್ ಮಾಡಿದ್ದು, ಕಳೆದ ವರ್ಷದ ಅಂತ್ಯಕ್ಕೆ ಪಟ್ಟಿಯನ್ನು ತಯಾರಿಸಿ ಸಿ.ಎ.ಓ.ಕಛೇರಿಗೆ ನೀಡಲಾಗಿದೆ ಎಂದು ತಿಳಿಸಿದರು.

- ಶಿವಾಜಿನಗರ ವಿಭಾಗದ ನಗದು ಗುಮಾಸ್ತರು ಮಾತನಾಡಿ ಹಿಂದಿನಿಂದಲು ವಿಭಾಗದಲ್ಲಿ ಯಾರು ಲೆಕ್ಕಪತ್ರಗಳನ್ನು ನಿರ್ವಹಣೆ ಮಾಡಿಲ್ಲ, ಹಿಂದಿನ 3 ವರ್ಷದ ಲೆಕ್ಕಗಳನ್ನು ಕೊಡಲು ಸಮಯಾವಕಾಶ ಒದಗಿಸಬೇಕೆಂದು ಕೋರಿದಾಗ, ಕೊಡಲಿಕ್ಕೆ ಏನು ತೊಂದರೆ, ಇದನ್ನು ಸಿ.ಎ.ಓ. ಗಮನಕ್ಕಾಗಲೀ ಅಥವಾ ಅಯುಕ್ತರ ಗಮನಕ್ಕಾಗಲಿ ತರಲಾಗಿದೆಯೇ? ಎಂದು ಅಧ್ಯಕ್ಷರು ಪ್ರಶ್ನಿಸಿದರು.

- ಶ್ರೀ.ವಿಜಯ್, ಲೆಕ್ಕ ಅಧೀಕ್ಷಕರು ಮಾತನಾಡಿ ಆಯವ್ಯಯಕ್ಕೆ ಎಲ್ಲಾ ಮಾಹಿತಿಗಳನ್ನು ಕೊಡುತ್ತಿದ್ದೇವೆ, ಅದೇ ರೀತಿ ನಮೂನೆಯನ್ನು ಸಿದ್ದಪಡಿಸಿ ಒದಗಿಸಿದಲ್ಲಿ ಅದೇ ರೀತಿ ಮಾಹಿತಿ ಒದಗಿಸಲಾಗುವುದು, ರಾಜರಾಜೇಶ್ವರಿ ನಗರ ವಿಭಾಗದ ಲೆಕ್ಕ ಅಧೀಕ್ಷಕರು ಮಾತನಾಡಿ ಪಿ.ಡಬ್ಲ್ಯೂ.ಡಿ.ಯಲ್ಲಿ ಹೆಡ್ ಅಫ್ ಅಕೌಂಟ್ ಇದೆ ಪಾಲಿಕೆಯಲ್ಲಿ ಅದು ಅನ್ವಯಿಸುವುದಿಲ್ಲವೆಂದಾಗ, ಯಾರ್ಯಾರು ಸಬ್‌ಮಿಟ್ ಮಾಡುತ್ತಾ ಇದ್ದೀರಿ ಅವರು ನಮೂನೆ ಇಲ್ಲದೆ ಕೊಡುತ್ತಿದ್ದೀರಾ ಎಂದು ಮುಖ್ಯ ಲೆಕ್ಕಾಧಿಕಾರಿಗಳು ಪ್ರಶ್ನಿಸಿದರು.

- ಶ್ರೀ.ದೊರೆಸ್ವಾಮಿ, ಲೆಕ್ಕ ಆದೀಕ್ಷಕರು, ಮಾತನಾಡಿ ಪ್ರತಿ ವಿಭಾಗದಲ್ಲಿ 3 ಬ್ಯಾಂಕ್ ಅಕೌಂಟ್ ಇದೆ ಒಂದನ್ನು ಫ್ಲೆಕ್ಸಿ ಅಕೌಂಟ್, ಇ.ಎಂ.ಡಿ. ಎಫ್.ಎಸ್.ಡಿ.ಗೆ ಉಪಯೋಗಿಸಲಾಗುತ್ತಿದೆ, ಇನ್ನೊಂದನ್ನು ರೆಮಿಟೆನ್ಸ್ ಮಾಡಲು ಉಪಯೋಗಿಸಲಾಗುತ್ತಿದೆ ಎಂದು ಮಾಹಿತಿ ಒದಗಿಸಿದರು.

- ಅಧ್ಯಕ್ಷರು, ಮಾಸಿಕ, ವಾರ್ಷಿಕ ಲೆಕ್ಕಪತ್ರಗಳನ್ನು ಮಾಡುತ್ತಿದ್ದಲ್ಲಿ ಎರಡು ದಿನದಲ್ಲಿ ಮಾಹಿತಿ ಒದಗಿಸಲು ಹಾಗು ವಿಧಾನ ಸಭಾ ಕ್ಷೇತ್ರವಾರು, ವಿಭಾಗವಾರು, ಮಾಸಿಕ ಲೆಕ್ಕಪತ್ರಗಳನ್ನು ಹಿಂದಿನ ಅಧ್ಯಕ್ಷರು ಕೋರಿದ್ದರು ಸಹ ನೀಡದಿರುವುದು ತಿಳಿದುಬಂದಿದೆ, ಯಾವ ಲೆಕ್ಕಪತ್ರಗಳನ್ನು ಮಾಡದೇ ಯಾವ ರೀತಿ ಆಯವ್ಯಯ ಮಾಡುತ್ತಾ ಇದ್ದೀರಿ ಎಂಬುದು ತಿಳಿದುಬಂದಿಲ್ಲ.

  ಅದ್ದರಿಂದ ಕಡ್ಡಾಯವಾಗಿ ಕಮಿಟಿಗೆ ಒದಗಿಸುವ ಬಗ್ಗೆ ಎಲ್ಲಾ ಕಚೇರಿಗೆ ಸುತ್ತೋಲೆ ಹೊರಡಿಸುವಂತೆ ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸುತ್ತಾ ಹೊಸ ವಲಯಗಳಲ್ಲಿ ಸಾಕಷ್ಟು ಲೆಕ್ಕಪತ್ರಗಳು ಇರುವುದು ಕಂಡುಬಂದಿದೆ, ಆದರೆ ಹಳೆ ವಲಯಗಳಲ್ಲಿ ಮಾಸಿಕ ಲೆಕ್ಕಪತ್ರಗಳನ್ನು ಒದಗಿಸಲು ಏನು ತೊಂದರೆ? ಬ್ಯಾಂಕ್ ಡೀಟೇಲ್ ಕೊಡಿ, ಮೊನ್ನೆ ನಡೆದ ಪರಿಚಯ ಸಭೆಯಲ್ಲಿ ಪಾಲಿಕೆಯಲ್ಲಿ ಎಷ್ಟು ಬ್ಯಾಂಕ್ ಅಕೌಂಟ್ ಇದೆ ಎಂಬುದರ ನಿಖರ ಮಾಹಿತಿ ಒದಗಿಸಲಿಲ್ಲ ಸಿ.ಎ.ಓ.ರವರು ಕಡ್ಡಾಯವಾಗಿ ನಿಖರ ಮಾಹಿತಿ ಇಟ್ಟುಕೊಂಡಿರಬೇಕು ಎಂದು ತಿಳಿಸಿದರು.

- ಮುಖ್ಯ ಲೆಕ್ಕಾಧಿಕಾರಿಗಳು ಮಾತನಾಡಿ ಸ್ವೀಕೃತಿ ಮತ್ತು ವೆಚ್ಚ, ಗ್ರಾಂಟ್ ಹೆಡ್, ಚೆಕ್ ವಿತರಣೆ ರಿಜಿಸ್ಟರ್, ಬಿ.ಆರ್.ಎಸ್. ಇತ್ಯಾಧಿಗಳನ್ನು ಕೆಲವರು ಮಾಡುತ್ತಿದ್ದಾರೆ, ಮಾಡದೇ ಇರುವವರು ದಿನಾಂಕ:31/3/12ಕ್ಕೆ ಅಂತ್ಯಕ್ಕೆ ಮಾಸಿಕ ಲೆಕ್ಕಪತ್ರಗಳನ್ನು ನಿರ್ವಹಿಸಿ ಒದಗಿಸಲು ಎಲ್ಲಾ ಲೆಕ್ಕ ಆಧೀಕ್ಷಕರಿಗೆ ಸೂಚಿಸಿದರು,

  ಮಾಸಿಕ ಲೆಕ್ಕಪತ್ರಗಳನ್ನು ಪ್ರತಿ ಮಾಹೆ ಒದಗಿಸಲು ಸರಳವಾಗುವಂತೆ ಪಾಲಿಕೆಯಲ್ಲಿರುವ ನಮೂನೆ, ಪಿ.ಡಬ್ಲ್ಯೂ.ಡಿ.ಯಲ್ಲಿರುವ ನಮೂನೆ ಎರಡನ್ನು ಚೆಕ್ ಮಾಡಿ ಒಂದು ಸುತ್ತೋಲೆ ಹೊರಡಿಸಲಾಗುವುದು, ಉಪ ನಿಯಂತ್ರಕರು(ಹಣಕಾಸು)ರವರಿಗೆ ಹೆಚ್ಚಿನ ಕೆಲಸ ನೀಡಿ ಫಾಲೊ ಅಪ್ ಮಾಡುವುದಾಗಿ ಹಾಗು ಪ್ರತಿ ತಿಂಗಳು ಮಾಸಿಕ ಲೆಕ್ಕಪತ್ರಗಳನ್ನು ಅಧ್ಯಕ್ಷರ ಆಪ್ತ ಶಾಖೆಗೆ ಒದಗಿಸಲಾಗುವುದು ಎಂದು ಮಾಹಿತಿ ಒದಗಿಸಿದರು.

- ಅಧ್ಯಕ್ಷರು ಮಾತನಾಡಿ ಶಿವಾಜಿನಗರ ಗುಮಾಸ್ತರು ನೀಡಿರುವ ಮಾಹಿತಿಯನ್ನು ಗಮನಿಸಿದರೆ ಬ್ಯಾಂಕ್ ಸ್ಟೇಟ್‌ಮೆಂಟ್ ಏನು ಇದೆ ಅದನ್ನು ನೋಡಿಕೊಂಡು ಬಿ.ಬಿ.ಎಂ.ಪಿಯಲ್ಲಿ ಅಕೌಂಟ್ ಕೊಡಲಾಗುತ್ತಿದೆ ಎಂದು ಭಾವಿಸಬೇಕಾಗಿದೆ, ಬ್ಯಾಂಕ್ ಲೆಕ್ಕದಲ್ಲಿ ಡೆಬಿಟ್ ಮತ್ತು ಕ್ರೆಡಿಟ್ ಬಂದರೆ ಲೆಕ್ಕವಾಗುತ್ತದೆಯೆ? ಕೂಡಲೇ ಒಂದು ವಾರದೊಳಗೆ ಎಲ್ಲಾ ಮಾಹಿತಿಗಳನ್ನು ಒದಗಿಸುವ ಬಗ್ಗೆ ಕ್ರಮಕೈಗೊಳ್ಳಲು ಹಾಗು ಒದಗಿಸದೇ ಇರುವ ವಿಭಾಗಗಳ ಲೆಕ್ಕ ಅಧೀಕ್ಷಕರ ಮೇಲೆ ಕ್ರಮ ಕೈಗೊಳ್ಳಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸಿದರು.

- ಜಾಹೀರಾತು ವಿಭಾಗದ ಬಗ್ಗೆ ಮಾತನಾಡಿದ ಅಧ್ಯಕ್ಷರು ಜಾಹೀರಾತು ವಿಭಾಗದಲ್ಲಿ ಎಷ್ಟು ವರಮಾನ ಬಂದಿದೆ, ಎಷ್ಟು ಬರಬೇಕಾಗಿತ್ತು, ಅಳತೆ ಪ್ರಕಾರ ನಾಮಫಲಕ ಅಳವಡಿಸಲಾಗಿದೆಯೇ ಎಂಬುದರ ಬಗ್ಗೆ ಮಾಹಿತಿ ಒದಗಿಸಬೇಕಾಗಿದೆ ಅದಕ್ಕೆ ಮುಂಚೆ ಈ ವಿಭಾಗದಿಂದ ಎಷ್ಟು ಆದಾಯ ಬಂದಿದೆ ಎಂಬ ಮಾಸಿಕ ಲೆಕ್ಕಗಳನ್ನು ಒದಗಿಸಲು ಮುಖ್ಯ ಲೆಕ್ಕಾಧಿಕಾರಿಗಳಿಗೆ ಸೂಚಿಸುವುದರೊಂದಿಗೆ ಸಭೆಯು ಮುಕ್ತಾಯವಾಯಿತು.

ಅಧ್ಯಕ್ಷರು,
ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು: :

- ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
- :ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
- :ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
- :ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
- ಅಪರ ಆಯುಕ್ತರು(ಹಣಕಾಸು)ರವರಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.
- ಮುಖ್ಯ ಲೆಕ್ಕಾಧಿಕಾರಿಗಳಿಗೆ ಮುಂದಿನ ಕ್ರಮಕ್ಕೆ ಕಳುಹಿಸಿದೆ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕಪತ್ರ ಸ್ಥಾಯಿ ಸಮಿತಿ ವತಿಯಿಂದ ದಿನಾಂಕ30-06-2012ರಂದು ಸಹಾಯಕ ನಿಯಂತ್ರಕರು(ಹಣಕಾಸು) ಪೂರ್ವರವರ ಕಛೇರಿಗೆ ತಪಾಸಣೆ ಕೈಗೊಂಡು ನಡೆಸಿದ ತಪಾಸಣಾ ನಡವಳಿ

| ಕ್ರ.ಸ | ಶ್ರೀಯುತರ ಹೆಸರು | ಹುದ್ದೆ |
|---|---|---|
| 1 | ಎಂ.ಗೌತಮ್ ಕುಮಾರ್ | ಅಧ್ಯಕ್ಷರು |
| 2 | ಎಸ್.ಶಶಿರೇಖ ಜಯರಾಮ | ಸದಸ್ಯರು |
| 3 | ಇರ್ಷಾದ್ ಬೇಗಂ | ಸದಸ್ಯರು |
| 4 | ಕೆ.ಚಂದ್ರಶೇಖರ್ | ಸದಸ್ಯರು |
| 5 | ರೇಖಾ | ಸದಸ್ಯರು |
| 6 | ಆರ್..ಉದಯಕುಮಾರ್ | ಸದಸ್ಯರು |
| 7 | ಎಂ.ಶ್ರೀನಿವಾಸ್ | ಸದಸ್ಯರು |
| 8 | ಮುನಿಸಂಜೀವಯ್ಯ | ಸದಸ್ಯರು |
| 9 | ಲೋಕೇಶ್ ನಾಯಕ್ | ಸದಸ್ಯರು |

ಪಾಲಿಕೆಯ ಲೆಕ್ಕಪತ್ರಗಳನ್ನು ಪರಿಶೀಲಿಸುವ ಸಲುವಾಗಿ ಲೆಕ್ಕಪತ್ರ ಸ್ಥಾಯಿ ಸಮಿತಿಯ ವತಿಯಿಂದ ದಿನಾಂಕ:30-06-2012ರಂದು ಸಹಾಯಕ ನಿಯಂತ್ರಾಣಾಧಿಕಾರಿ(ಹಣಕಾಸು) ಪೂರ್ವ ಕಚೇರಿಯನ್ನು ತಪಾಸಣೆ ಮಾಡಲಾಯಿತು. ಸದರಿ ತಪಾಸಣೆಯಲ್ಲಿ ಕಚೇರಿಯ ಲೆಕ್ಕಪತ್ರಗಳನ್ನು ಪರಿಶೀಲಿಸಿದಾಗ, ಸಿಬ್ಬಂದಿಗ ಮಾಹಿತಿಯಂತೆ ಈ ಕಚೇರಿಗೆ ಒಟ್ಟು 117 ಡಿ.ಡಿ.ಓ.ಗಳು ಕಚೇರಿಗಳು ಬರುತ್ತಿವೆ. ಬ್ಯಾಂಕ್ ಖಾತೆಯಲ್ಲಿ ಈಗಲೂ ಈ ಹಿಂದೆ ಕಾರ್ಯನಿರ್ವಹಿಸಿದ್ದ ಸಹಾಯಕ ನಿಯಂತ್ರಕರ ಹೆಸರುಗಳೇ ಬರುತ್ತಿರುವುದರಿಂದ ಹಣ ದುರುಪಯೋಗವಾಗುವ ಸಂಭವ ಇದ್ದು, ಕೂಡಲೇ ಹೆಸರುಗಳನ್ನು ತೆಗೆದು ಹಾಕಿಸುವ ಬಗ್ಗೆ ಕ್ರಮಕೈಗೊಳ್ಳಲು ಸಹಾಯಕ ನಿಯಂತ್ರಕರಿಗೆ ಸೂಚಿಸಲಾಯಿತು.

ಚಾಲನಾ ತರಬೇತಿಗೆ ಹಂಚಿಕೆ ಮಾಡುವ ಸಂದರ್ಭದಲ್ಲಿ ಸದರಿ ಶಾಲೆಯಲ್ಲಿ ವಾಹನಗಳು ಇವೆಯಾ? ಪಾಲಿಕೆ ಸದಸ್ಯರ ಶಿಫಾರಸ್ಸು, ಅಭ್ಯರ್ಥಿಗಳ ಅರ್ಜಿ, ಡಿ.ಎಲ್. ವಿತರಿಸಿರುವ ಬಗ್ಗೆ ದಾಖಲಾತಿ ಇದ್ಯಾವುದನ್ನು ಪರಿಶೀಲಿಸುವ ಕ್ರಮವನ್ನು ಸಹಾಯಕ ನಿಯಂತ್ರಕರು (ಹಣಕಾಸು) ರವರು ನಿರ್ವಹಿಸುತ್ತಿಲ್ಲದಿರುವುದು ಸಮಿತಿಗೆ ಕಂಡುಬಂದಿದೆ.

<u>ಈ ಕೆಳಕಂಡ ಹಲವಾರು ನ್ಯೂನತೆಗಳು ಸಮಿತಿಗೆ ಕಂಡುಬಂದಿರುತ್ತದೆ.</u>

1) ಸದರಿ ಕಚೇರಿಯ ಬ್ಯಾಂಕ್ ಪಾಸ್ ಶೀಟನ್ನು ಪರಿಶೀಲಿಸಿದಾಗ ಸುಮಾರು 5.80ಕೋಟಿ ರೂಗಳನ್ನು ಖಾತೆಯಲ್ಲಿ ಹಲವಾರು ದಿವಸಗಳಿಂದ ಇಟ್ಟುಕೊಂಡಿದ್ದು, ಇದನ್ನು ಕೇಂದ್ರ ಕಚೇರಿಗೆ ಹಿಂದಿರುಗಿಸದೇ, ದಿನಾಂಕ:21-6-2012ರಂದು ಸದರಿ ಮೊತ್ತವನ್ನು ಬೇರೆ ವೆಚ್ಚಕ್ಕೆ ಉಪಯೋಗಿಸಲು ಅನುಮತಿ ಕೋರಿದ್ದು, ಅನುಮತಿ ಪಡೆಯದೆ ವೆಚ್ಚವನ್ನು ಭರಿಸಲಾಗಿದೆ.

2) ಸಹಾಯಕ ನಿಯಂತ್ರಕರು(ಹಣಕಾಸು)ಪೂರ್ವ ಕಚೇರಿಯ ಬ್ಯಾಂಕ್ ಖಾತೆಯನ್ನು ಪರಿಶೀಲಿಸಿದಾಗ ಖಾತೆ ಸಂಖ್ಯೆ:39ರ ಸ್ಟೇಟ್‌ಮೆಂಟ್‌ನಲ್ಲಿ ಕಸ್ಟಮರ್ ಹೆಸರಿನಲ್ಲಿ ವೈಯಕ್ತಿಕ ಹೆಸರುಗಳು ಇದ್ದು ಇದರಿಂದ ಪಾಲಿಕೆಯ ಹಣ ದುರುಪಯೋಗವಾಗುವ ಸಂಭವ ಇರುತ್ತದೆ.

3) ವಾಹನ ಚಾಲನಾ ತರಬೇತಿಗೆ ಪಾಲಿಕೆಯ ವತಿಯಿಂದ ಆಭ್ಯರ್ಥಿಗಳನ್ನು ನಿಯೋಜಿಸಿ ಬಿಲ್ ಪಾವತಿಸುವ ಪದ್ಧತಿ ಇದ್ದು, ಮೆ:ಭಾರತ್ ಮೋಟಾರ್ಸ್ ಶಾಲೆಯವರು ನೀಡಿರುವ ಬಿಲ್ಲನ್ನೇ ಆದಾರವಾಗಿ ಇಟ್ಟುಕೊಂಡು ಸುಮಾರು 4.01ಲಕ್ಷ ರೂಗಳಷ್ಟು ಹಣದ ಬಿಲ್ಲನ್ನು ಅಂಗೀಕರಿಸಿ ಚೆಕ್ ನೀಡಲಾಗಿದೆ, ಇದರಲ್ಲಿ ಸದರಿ ಬಿಲ್ಲಿನಲ್ಲಿ ಆದ್ಯತೆಯ ಮೇಲೆ ಪರಿಶೀಲಿಸಬೇಕಾದ ಯಾವುದೇ ಹಾಜರಾತಿ ಪತ್ರ, ಅಭ್ಯರ್ಥಿಗಳಿಗೆ ಲೈಸೆನ್ಸ್ ನೀಡಿರುವ ಬಗ್ಗೆ ಖಾತರಿ, ಅಭ್ಯರ್ಥಿಗಳ ಅರ್ಜಿ ಇತ್ಯಾಧಿ ಯಾವ ದಾಖಲೆಗಳನ್ನು ಪರಿಶೀಲಿಸದೇ ಎ.ಸಿ.ಎಫ್.ರವರು ಹಣ ಬಿಡುಗಡೆ ಮಾಡಿರುವುದನ್ನು ಗಮನಿಸಲಾಯಿತು.

4) ಅತೀ ಗಂಬೀರವಾದ ಇನ್ನೊಂದು ಅಂಶವೆಂದರೆ ಮೆ:ಭಾರತ್ ಮೋಟಾರ್ಸ್ ಶಾಲೆಯವರುವ ನೀಡಿರುವ ಬಿಲ್ಲಿನ ಆಧಾರ ಡಿ.ಸಿ.ಬಿಲ್ಲನ್ನು ಸಹಾಯಕ ಕಲ್ಯಾಣಾಧಿಕಾರಿ ಪೂರ್ವ ಕಚೇರಿಯಿಂದ ತಯಾರಿಸಿದ್ದು, ಸದರಿ ಬಿಲ್ಲು ಅಪೂರ್ಣಗೊಂಡಿದ್ದರು ಸಹ ಅಂದರೆ ಲೆಕ್ಕ ಶೀರ್ಷಿಕೆ, ಹಣ ಹಂಚಿಕೆ, ವೆಚ್ಚ, ಹೊಂದಾಣಿಕೆ ಮತ್ತು ಮೇಲು ಅಧಿಕಾರಗಳ ಸಹಿ ಇಲ್ಲದಿದ್ದರು ಸಹ ಸಹಾಯಕ ನಿಯಂತ್ರಣಾಧಿಕಾರಿಗಳು ಬಿಲ್ಲನ್ನು ಅಂಗೀಕರಿಸಿ ಹಣ ಬಿಡುಗಡೆ ಮಾಡಿರುವುದು ನಿಯಮಾನುಸಾರ ಇರುವುದಿಲ್ಲ.

5) ಹಲವಾರು ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ, ಕಸ ತೆಗೆದಿರುವ ಬಿಲ್ಲುಗಳ ಪಾವತಿಯ ಬಿಲ್ಲುಗಳನ್ನು ಪರಿಶೀಲಿಸಿದಾಗ ಸದರಿ ಬಿಲ್ಲುಗಳನ್ನು ಡಿ.ಸಿ.ಬಿಲ್ಲಿನಲ್ಲಿ ಪಾವತಿ ಮಾಡಿದ್ದು, ಕೇವಲ ಐ.ಎಫ್.ಎಂ.ಎಸ್ ಶೀಟ್ ಮತ್ತು ಟಿಪ್ಪಣಿ ಹಾಳೆಯ ಮೇಲೆ ಪಾವತಿಗಳನ್ನು ಮಾಡಲಾಗಿದೆ. ಈ ಬಗ್ಗೆ ಪರಿಶೀಲಿಸಿದಾಗ ಸಂಬಂಧಪಟ್ಟ ಸಹಾಯಕ ನಿಯಂತ್ರಕರು ನಮಗೆ ಯಾವುದೇ ಅಧಿಕಾರವಿರುವುದಿಲ್ಲ, ಬಿಲ್ಲನ್ನು ಅಂಗೀಕರಿಸುವಾಗ ಹಾಜರಾತಿ ಇತ್ಯಾಧಿಗಳನ್ನು ಪರಿಶೀಲಿಸಿ ಪಾವತಿಸುವ ಅಧಿಕಾರ ನಮ್ಮ ವ್ಯಾಪ್ತಿ ಬರುವುದಿಲ್ಲವೆಂದು ತಿಳಿಸಿರುತ್ತಾರೆ, ಇದರಿಂದ ಸದರಿ ಕಚೇರಿಯಲ್ಲಿ ಯಾವ ರೀತಿ ಲೆಕ್ಕಪತ್ರಗಳನ್ನು ಪರಿಶೀಲನೆ ಮಾಡಿ ಪಾವತಿಸಿಲಾಗುತ್ತಿದೆ, ಎಂಬುದನ್ನು ಮನಗಂಡಲ್ಲಿ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗುತ್ತಿದೆ ಎಂಬುದನ್ನು ಗಮನಿಸಬಹುದಾಗಿರುವುದರಿಂದ ಈ ಬಗ್ಗೆ ಕ್ರಮಕೈಗೊಳ್ಳಬೇಕೆಂದು ಆಯುಕ್ತರನ್ನು ಸಮಿತಿಯು ಒತ್ತಾಯಿಸುತ್ತದೆ.

6) ನಿವೃತ್ತಿ ನೌಕರರಿಗೆ ಮಂಜೂರಾಗಿರುವ ವಿವಿಧ ಉಪದಾನಗಳನ್ನು ಹೆಚ್ಚಿಗೆ ಮಂಜೂರು ಮಾಡಿ ಸುಮಾರು 1.14 ಕೋಟಿ ನಷ್ಟ ಉಂಟಾಗಿರುವುದನ್ನು ಲೆಕ್ಕಪರಿಶೋಧಕರು ತಿಳಿಸಿದ್ದು, ಸದರಿ ಮಾಹಿತಿಯ ಬಗ್ಗೆ ಕಡತಗಳನ್ನು ಒದಗಿಸಲು ಸೂಚಿಸಿದಾಗ ಸಂಬಂಧಪಟ್ಟ ಕಚೇರಿಯಿಂದ ಕಡತಗಳು ಬರುತ್ತವೆ, ಅದನ್ನು ಮುಖ್ಯಲೆಕ್ಕಾಧಿಕಾರಿಗಳ ಕಚೇರಿಗೆ ಹಣ ಪಾವತಿಗೆ ಕಳುಹಿಸುತ್ತೇವೆ, ಎಂದು ಹಾರಿಕೆ ಉತ್ತರ ನೀಡಿದ್ದು, ಈ ಕುರಿತು ಕೇಂದ್ರ ಕಚೇರಿಯ ಅಧಿಕಾರಿಗಳನ್ನು ಪ್ರಶ್ನಿಸಿದರೆ ಎ.ಸಿ.ಎಫ್ ರವರು ಎಲ್ಲವನ್ನು ಅಂಗೀಕರಿಸಿ ಪಾವತಿಗಾಗಿ ಮಾತ್ರ ಬಿಲ್ಲನ್ನು ಕಳುಹಿಸುತ್ತಾರೆ, ಅದರಂತೆ ಚೆಕ್ ವಿತರಿಸಲಾಗುತ್ತಿದೆ ಎಂದು ಮಾಹಿತಿ ಒದಗಿಸಿರುತ್ತಾರೆ.

ಅದರೆ ಈ ರೀತಿ ಯಾವ ಹಂತದಲ್ಲಿ ಬಿಲ್ಲುಗಳು ಪರಿಶೀಲನೆಗೆ ಒಳಪಡುತ್ತವೆ, ಪರಿಶೀಲನೆ ಮಾಡುವವರು ಯಾರು ಎಂಬುದೇ ಸಮಿತಿಗೆ ಅನುಮಾನಾಸ್ಪದವಾಗಿ ಕಂಡುಬಂದಿರುವುದರಿಂದ, ಈ ಬಗ್ಗೆ ಶೀಘ್ರ ಕ್ರಮಕೈಗೊಳ್ಳಲು ಆಯುಕ್ತರನ್ನು ಸಮಿತಿಯು ಒತ್ತಾಯಿಸುತ್ತದೆ.

ಅಧ್ಯಕ್ಷರು,

ಲೆಕ್ಕಪತ್ರ ಸ್ಥಾಯಿ ಸಮಿತಿ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

<u>ಪ್ರತಿಯನ್ನು:</u>

:ಪೂಜ್ಯ ಮಹಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಮಾನ್ಯ ಉಪ ಮಹಾಪೌರರ ಅವಗಾಹನೆಗೆ ಸಲ್ಲಿಸಲಾಗಿದೆ.
:ಲೆಕ್ಕಪತ್ರ ಸ್ಥಾಯಿ ಸಮಿತಿಯ ಎಲ್ಲಾ ಸದಸ್ಯರುಗಳಿಗೆ ಕಳುಹಿಸಿದೆ.
:ಆಯುಕ್ತರು ರವರ ಅವಗಾಹನೆಗೆ ಹಾಗು ಮುಂದಿನ ಕ್ರಮಕ್ಕೆ ಕಳುಹಿಸಿದೆ.
:ಸಂಬಂಧಪಟ್ಟ ಅಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.